# ವೈಚಾರಿಕ ಸೌಂದರ್ಯ

ವೈಚಾರಿಕ ಮನೋಭಾವವು ಒಂದು ದೇಶ, ಸಮಾಜ ಹಾಗೂ ಅಲ್ಲಿನ ಎಲ್ಲ ಹಿನ್ನೆಲೆಯ ಜನರನ್ನೂ ಮತ್ತು ನಿಸರ್ಗ ಪ್ರೀತಿಯನ್ನೂ ನಮ್ಮೊಳಗೆ ನಿರಂತರವಾಗಿ ಪೋಷಿಸುತ್ತದೆ. ಮನುಷ್ಯನ ಘನತೆಯನ್ನು ಉಜ್ವಲಗೊಳಿಸುವ ಇಂತಹ ಮಾನವ ಪ್ರೇಮದ ವೈಚಾರಿಕತೆಯನ್ನು ಯಥಾಸ್ಥಿತಿವಾದಿಗಳು ಮತಧರ್ಮದ ಹೆಸರಿನಲ್ಲಿ ದಮನ ಮಾಡಲು ಮುಂದಾಗುತ್ತಿರುವುದು ಭಾರತದಲ್ಲಿ ನಿತ್ಯ ಸಂಗತಿಯಾಗಿದೆ. 'ಆರೋಗ್ಯಕರ ಮನಸ್ಸು, ಸ್ವಚ್ಛ ಹೃದಯ, ಜನಪರ ಕಾಳಜಿ, ಒಳ್ಳೆಯ ಗಾಳಿ, ಬೆಳಕು ಬರುವಂತಿದ್ದರೆ ಅದೇ ಉತ್ತಮ ವಾಸ್ತು' 'ವಾಸ್ತು' ಸರಿಯಿಲ್ಲವೆಂದು ಐದು ವರ್ಷಗಳಿಂದ ಮುಚ್ಚಿದ್ದ ವಿಧಾನಸೌಧದ ಬಾಗಿಲನ್ನು ತೆರೆಸಿದ ವೇಳೆಯಲ್ಲಿ ನಾಡಿನ ಮುಖ್ಯಮಂತ್ರಿಗಳು ಹೇಳಿದ ಮಾತು ನಿರಾಶೆ ಕವಿದ ಕಗ್ಗತ್ತಲಿನ ದಿನಗಳಲ್ಲೂ 'ಮೌಢ್ಯ'ದ ವಿರುದ್ಧ ಕೈಗೊಂಡ ಒಂದು ಗಟ್ಟಿ ನಿರ್ಧಾರವನ್ನು ಕಂಡು ಮನಸ್ಸು ಹರುಷಗೊಳ್ಳುತ್ತದೆ.

ಸಾಮಾಜಿಕ ಪರಿವರ್ತನೆಯನ್ನು ತಡೆಯಲು ಇರುವ ದೊಡ್ಡ ಅಡೆತಡೆ ಎಂದರೆ, ಮತಧರ್ಮ ಕುರಿತ ನಮ್ಮ ಮೌಢ್ಯಗಳೇ ಆಗಿವೆ ಎಂಬುದು ನಿಚ್ಚಳ ಸಂಗತಿ. ವೈಚಾರಿಕತೆ ಎನ್ನುವುದು ಸಂಪ್ರದಾಯಬದ್ಧವಾದ ಎಲ್ಲ ಅತಾರ್ಕಿಕ ನಂಬಿಕೆಗಳನ್ನು ಒರೆಗೆ ಹಚ್ಚುತ್ತದೆ. ಹಾಗೆಯೇ ಜೀವಪರವಾದ ಮೌಲ್ಯಗಳನ್ನು ಸ್ವೀಕರಿಸುತ್ತದೆ. ಅಸಲಿ ವಿಷಯವೆಂದರೆ ಇಂದಿನ ನಮ್ಮ ಸಮಾಜವನ್ನು ತೀವ್ರವಾಗಿ ಬಾಧಿಸುತ್ತಿರುವುದು ವಾಸ್ತವಲೋಕದ ಸಮಸ್ಯೆಗಳೇ ಹೊರತು, ಅಲೌಕಿಕ ಹಾಗೂ ಅಭೌತಿಕ ಸಮಸ್ಯೆಗಳಲ್ಲ! ಸಮಾಜದಲ್ಲಿನ ಮೌಢ್ಯ, ಹಿಂಸೆ ಹಾಗೂ ದೇಶ ವಿಭಜನೆಯ ಕ್ರೌರ್ಯಗಳನ್ನು ತೀಕ್ಷ್ಣವಾಗಿ ಹೇಳುವ ಜಗತ್‌ಪ್ರಸಿದ್ಧ ಲೇಖಕ ಮಾಂಟೋನ ಕತೆಯೊಂದು ಹೀಗಿದೆ:

'ಪೊಲೀಸರು ಲೂಟಿ ಮಾಡಿದ್ದ ಸಾಮಾನುಗಳನ್ನು ವಶಪಡಿಸಿಕೊಳ್ಳಲು ಮನೆ ಮನೆಗಳನ್ನು ಜಪ್ತಿ ಮಾಡುತ್ತಿದ್ದರು. ಜನ ಹೆದರಿಕೊಂಡು, ತಾವು ಲೂಟಿ ಮಾಡಿದ್ದ ಅಮೂಲ್ಯ ವಸ್ತುಗಳನ್ನು ಕತ್ತಲಾದ ನಂತರ ಯಾರಿಗೂ ತಿಳಿಯದ ಹಾಗೆ ಬೀದಿಗೆಸೆಯತೊಡಗಿದರು. ಜನ ಕೋರ್ಟು–ಕಟ್ಲೆಗಳ ಕಿರಿಕಿರಿಗೆ ಎಷ್ಟು ಹೆದರಿಕೊಂಡಿದ್ದರು ಎಂದರೆ ತಮ್ಮ ಸ್ವಂತದ ವಸ್ತುಗಳನ್ನು ಸಹ ಭಯದಿಂದ ಹೊರಗೆಸೆಯತೊಡಗಿದ್ದರು.

ಒಬ್ಬನಿಗೆ ಮಾತ್ರ ಒಂದು ಸಮಸ್ಯೆ ಎದುರಾಯಿತು. ಆತ ಅಂಗಡಿಯೊಂದನ್ನು ಧ್ವಂಸಗೊಳಿಸುವಾಗ ಎರಡು ಮೂಟೆ ಸಕ್ಕರೆಯನ್ನು ಎತ್ತಿಕೊಂಡು ಬಂದಿದ್ದ. ಒಂದು ದಿನ ರಾತ್ರಿ ಅವನು ಪ್ರಯಾಸದಿಂದ ಎರಡೂ ಮೂಟೆಗಳನ್ನು ಹತ್ತಿರದ ಬಾವಿಯ ಬಳಿ ಎಳೆದು ತಂದ. ಮೊದಲ ಮೂಟೆಯನ್ನೇನೊ ಸರಾಗವಾಗಿ ಬಾವಿಗೆ ಎಸೆದ. ಆದರೆ ಎರಡನೆಯ ಮೂಟೆಯನ್ನು ತಳ್ಳುವ ರಭಸದಲ್ಲಿ ಮೂಟೆಯ ಜೊತೆ ಅವನೂ ಬಾವಿಯೊಳಗೆ ಬಿದ್ದ. ಅವನ ಬೊಬ್ಬೆ ಕೇಳಿ ನೆರೆಹೊರೆಯವರು ಗಡಬಡಿಸಿ ಎದ್ದುಬಂದು ಹಗ್ಗ ಹಾಕಿ ಮೇಲೆ ಎಳೆದುಕೊಳ್ಳಲು ಪ್ರಯತ್ನಿಸಿದರು. ಅದು ಸಾಧ್ಯವಾಗದಾಗ, ಇಬ್ಬರು ಬಾವಿಗೆ ಜಿಗಿದು ಅವನನ್ನು ಮೇಲೆತ್ತಿ ತಂದರೂ ಅವನ ಜೀವ ಉಳಿಯಲಿಲ್ಲ. ಮರುದಿನ ಜನ ಬಾವಿಯ ನೀರನ್ನು ಸೇದಿ ಕುಡಿದಾಗ ನೀರು ಬಲು ಸಿಹಿಯಾಗಿತ್ತು. ಅಂದು ರಾತ್ರಿ ಜನ ದೀಪ ಹಚ್ಚಿಟ್ಟು ಆ ಪವಾಡಪುರುಷನ ಮಹಿಮೆಯನ್ನು ಕೊಂಡಾಡಿದರು'. ಇಂತಹ ಮೌಢ್ಯವನ್ನು ಕುರಿತು ವ್ಯಂಗ್ಯದ ಕನ್ನಡದ ಗಾದೆಯೊಂದು ಹೇಳುತ್ತದೆ 'ಎದ್ದಕಲ್ಲು ಪೂಜಾರಿಯದು, ಬಿದ್ದಕಲ್ಲು ಅಗಸನದು!

ಮೌಢ್ಯವನ್ನು ಆಚರಿಸುವ ರಾಷ್ಟ್ರಗಳಲ್ಲಿ ಭಾರತ ಮೊದಲ ಸಾಲಿನಲ್ಲಿದೆ. ನಮ್ಮ ಇಂದಿನ ಜ್ಞಾನ ದೇಗುಲಗಳೇ ಸಂಕುಚಿತ, ಮತಾಂಧತೆ ಮತ್ತು ಅಲ್ಪ ಉದ್ದೇಶಗಳ ಗೂಡಾಗಿವೆ. ಇದರಿಂದಾಗಿ ಸ್ವತಂತ್ರ ಆಲೋಚನೆ, ಸಂಶೋಧನೆ, ಸೃಜನಶೀಲತೆ ಎನ್ನುವುದು ಬದಲಾವಣೆಯನ್ನೊಲ್ಲದ ಜಡವಾದಿಗಳ ಬಂಧನದಲ್ಲಿರುತ್ತದೆ! ವೈಚಾರಿಕತೆಯನ್ನು ಅಡಗಿಸುವುದು ಎಂದರೆ ಅದು ಮನುಷ್ಯನ ಮನೋವಿಕಾಸವನ್ನು ಬಂಧಿಸಿದಂತೆ. ಸಮಾಜದ ಸ್ವಾತಂತ್ರ್ಯದ ದನಿಯನ್ನು ದಮನಿಸಿದಂತೆ! ಪಂಡಿತ್ ನೆಹರೂ ಹೇಳುವಂತೆ ವೈಚಾರಿಕ ಮನೋಭಾವ ಎಂದರೆ 'ಮಾನವೀಯತೆ, ಸಹಿಷ್ಣುತೆ, ವಿವೇಕ, ಪ್ರಗತಿ, ಆಲೋಚನಾಶೀಲತೆ, ಸತ್ಯಾನ್ವೇಷಣೆಗಳ ಪ್ರತೀಕ'.

ಮುಖ್ಯವಾಗಿ ವೈಚಾರಿಕ ಮನೋಭಾವವು ಅನುಭವ ಸಿದ್ಧವಾದ, ಕಂಡು ತಿಳಿಯಬಹುದಾದ ಆಧಾರಗಳನ್ನು ಮಾತ್ರ ಸ್ವೀಕರಿಸುತ್ತದೆ. ಸ್ವಾತಂತ್ರ್ಯ ಮತ್ತು ಭಿನ್ನಮತವನ್ನು ಗೌರವಿಸುವ ಗುಣವಿರುವ ವೈಚಾರಿಕತೆ ಇರುವಲ್ಲಿ ಇನ್ನೊಬ್ಬರ ಅಭಿಪ್ರಾಯಗಳನ್ನು ಉಡುಗಿಸುವ ಮನೋಭಾವ, ತನ್ನದೇ ಸರಿಯೆಂದು ತಿಳಿಯುವ ಸರ್ವಾಧಿಕಾರಿ ಮನಸ್ಥಿತಿಗೆ ಸ್ಥಳವಿರುವುದಿಲ್ಲ. ವೈಚಾರಿಕತೆಯಿಂದ ಕೂಡಿರುವ ಮನೋಸ್ಥಿತಿಯು ಬರೀ ಬೌದ್ಧಿಕಮಟ್ಟದ ತಿಳಿವಲ್ಲ! ಅದು ವ್ಯಕ್ತಿಯೊಬ್ಬನು ನಡೆಸಿದ ನಿರಂತರ ಧ್ಯಾನದ ಫಲ. ಅದು ಅವನೊಳಗೆ ಸಾಮರಸ್ಯ ಹಾಗೂ ಸ್ವಾತಂತ್ರ್ಯದ ಬೀಜವನ್ನು ಬಿತ್ತುತ್ತದೆ. ವೈಚಾರಿಕತೆ ಎನ್ನುವುದು ಕೇವಲ ವ್ಯಕ್ತಿಗಾಗಿ ಮಾತ್ರ ಅಲ್ಲ, ಸಮಾಜಕ್ಕಾಗಿ ಅಲ್ಲ, ಒಂದು ದೇಶಕ್ಕಾಗಿ ಮಾತ್ರವಲ್ಲ, ಅದು ಇಡೀ ಜಗತ್ತನ್ನು ಸುಂದರಗೊಳಿಸಲು ಕೂಡ ಇರುತ್ತದೆ.

ಕನ್ನಡದ ವಚನ ವಾಙ್ಮಯವೆನ್ನುವುದು ವೈಚಾರಿಕ ಚಿಂತನೆಯ ನಿಧಿ. ವೈಚಾರಿಕ ಚಿಂತನೆಯ ಸೊಗಸು ಎರಡು ರೀತಿಯಲ್ಲಿ ವ್ಯಕ್ತಗೊಳ್ಳುತ್ತದೆ. ಒಂದು: ನಡೆಯಲ್ಲಿ. ಮತ್ತೊಂದು: ನುಡಿಯಲ್ಲಿ. ವೈಚಾರಿಕ ಚಿಂತನೆಯ ಸೌಂದರ್ಯ ಇರುವುದು ಸೃಜನಶೀಲ ಚಿಂತನೆ ಮತ್ತು ಅದನ್ನು ಅನುಷ್ಠಾನಗೊಳಿಸುವ ನಡೆಯಲ್ಲಿ. ಅದು ವ್ಯಕ್ತಿಯ ಚಾರಿತ್ರ್ಯಕ್ಕೊಂದು ಘನತೆಯ ಪ್ರಭಾವಳಿಯನ್ನು ನಿರ್ಮಿಸುತ್ತದೆ. ಹೀಗಾದಾಗ ಸಹಜವಾಗಿ ಇಡೀ ಜೀವನವು ಹೊಸ ದೃಷ್ಟಿಯಲ್ಲಿ, ಹೊಸ ಬೆಳಕಿನಲ್ಲಿ ಚೈತನ್ಯದಿಂದಿರುತ್ತದೆ. ನಮ್ಮ ಮನಸ್ಸು ಬಹುಬಣ್ಣಗಳ ಹೂದೋಟದ ಸೌಂದರ್ಯದಂತೆ ಕೂಡಿರುತ್ತದೆ.

ಒಬ್ಬ ನಿಜವಾದ ವೈಚಾರಿಕ ಚಿಂತಕನ ಮನಸ್ಸು ಜ್ಞಾನಿ ಮತ್ತು ಲೋಕಾನುಭವಿಯ ತಿಳಿವನ್ನು ಹೊಂದಿರುತ್ತದೆ. ವೈಚಾರಿಕ ಚಿಂತನೆಯ ಅಸ್ತಿಭಾರದ ಮೇಲೆ ಸಮಾಜವನ್ನು ಕಟ್ಟಲು ಕಟಿಬದ್ಧರಾಗಿದ್ದ ಬುದ್ಧದೇವ, ಬಸವ, ಅಲ್ಲಮ, ಅಕ್ಕಮಹಾದೇವಿ, ಶರೀಫ, ಗಾಂಧಿ, ಲೋಹಿಯಾ, ಅಂಬೇಡ್ಕರ್, ಕುವೆಂಪು ಮೊದಲಾದ ಲೋಕಹಿತದ ಚಿಂತಕರು ನಾಡಿನ ವೈಚಾರಿಕ ಪರಂಪರೆಯ ಹೆಮ್ಮೆಯ ಪ್ರತಿನಿಧಿಗಳು. ಇಂತಹವರ ಚಿಂತನೆಗಳೇ ನಮಗೆ ದಾರಿದೀಪಗಳು.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಕ್ರಾಂತಿ ಎಂದರೆ ಹಳೆಯದರ ನಾಶವಲ್ಲ. ಹಳೆಯದರಲ್ಲಿ ಏನೇನು ಒಳ್ಳೆಯದು ಇದೆಯೋ ಅದನ್ನು ಉಳಿಸಿಕೊಂಡು ಹೊಸ ಬದುಕನ್ನು ಕಟ್ಟಿಕೊಳ್ಳುವುದು.
  —ಜಿ.ಎಸ್. ಶಿವರುದ್ರಪ್ಪ
- ನೀತಿಯ ನೆಲೆಗಟ್ಟಿಲ್ಲದ ವಾದವು ಮಾತಿನ ವ್ಯಭಿಚಾರ.
  —ಎಸ್.ಎಲ್. ಭೈರಪ್ಪ
- ಜೀವಂತವಾದ ಯಾವ ಭಾಷೆಯೂ ತಾನು ಕಡಿಮೆ ಯೋಗ್ಯತೆಯ ಭಾಷೆಯೆಂದು ಕುಗ್ಗಬಾರದು. 'ಕನ್ನಡ' ಜಗತ್ತಿನ ಯಾವ ಭಾಷೆಗೂ ಕಡಿಮೆಯದಲ್ಲ.
  —ಮಾಸ್ತಿ ವೆಂಕಟೇಶ ಅಯ್ಯಂಗಾರ್
- ಪ್ರೀತಿ ಎಂಬುದು ಆರೋಗ್ಯವಂತರ ಕಾಯಿಲೆ.
  —ಪಿ. ಲಂಕೇಶ್
- ನುಡಿ ನಡೆವ ಕಾಲದಲ್ಲಿ ದಾನಧರ್ಮ ಮಾಡದೆ, ಅಡವಿಯ ಕೆರೆ ತುಂಬಿ ಬತ್ತಿದಂತೆ.
  —ಕನಕದಾಸ
- ಬರಲಿರುವ ಸನ್ನಿವೇಶಗಳನ್ನು ಸದಾ ನಿಮ್ಮ ಪರವಾಗಿ ಇಟ್ಟುಕೊಳ್ಳುವುದು ಜಾಣತನ.
  —ವಿ.ಕೃ. ಗೋಕಾಕ್
- ನಾವು ನಂಬುವ ತತ್ವಗಳಿಗಿಂತ, ದೇವರಿಗಿಂತ, ನಾವು ಬದುಕುವ ರೀತಿ ಮುಖ್ಯ.
  —ಎ.ಎನ್. ಮೂರ್ತಿರಾವ್